ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 24–03–2017

# ಪತ್ರಿಕಾ ಆಮಂತ್ರಣ

1. ಎಂಪ್ರಿ ಸಂಸ್ಥೆ ಸಿಬ್ಬಂದಿ ಹಾಗೂ ಸ್ವಯಂ ಸೇವಕರನ್ನೊಳಗೊಂಡು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಸಂಗ್ರಹಗೊಂಡಿರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಸ್ವಚ್ಛಗೊಳಿಸುವುದರ ಜೊತೆಗೆ ಸಾರ್ವಜನಿಕರಿಗೆ "ಪ್ಲಾಸ್ಟಿಕ್ ನಿಷೇಧ" ಅರಿವು ಮೂಡಿಸುವ ಸಲುವಾಗಿ ಜಾಥಾ ಕಾರ್ಯಕ್ರಮ:

   ದಿನಾಂಕ: 25–03–2017 ಶನಿವಾರ ಸಮಯ : ಬೆಳಿಗ್ಗೆ 8.00 ಗಂಟೆಗೆ

   ಸ್ಥಳ : ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು.

2. <u>ಸಾವಯವ ಹಾಗೂ ಸಿರಿಧಾನ್ಯ ಮೇಳ ಮತ್ತು ಮಾರಾಟ ಮಳಿಗೆ ಉದ್ಘಾಟನೆ:</u>

   <u>ಮಾರಾಟ ಮಳಿಗೆ ಉದ್ಘಾಟನೆ:</u>
   ಡಿ.ವಿ. ಸದಾನಂದಗೌಡ, ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು.

   <u>ಮೇಳದ ಉದ್ಘಾಟನೆ:</u>
   ಕೃಷ್ಣ ಬೈರೇಗೌಡ, ಕೃಷಿ ಸಚಿವರು.

   <u>ಆಹಾರ ಮಳಿಗೆ ಉದ್ಘಾಟನೆ:</u>
   ಎಂ.ಆರ್. ಸೀತಾರಾಮ್, ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

   <u>ಸಾವಯವ ಪ್ರಾಂತೀಯ ಒಕ್ಕೂಟಗಳ ಮಾರಾಟ ಮಳಿಗೆಗಳ ಉದ್ಘಾಟನೆ:</u>
   ಸೋಮಶೇಖರ್ ಬಿ. ಅಧ್ಯಕ್ಷರು, ರಾಜ್ಯ ಸಾವಯವ ಕೃಷಿ ಉನ್ನತ ಮಟ್ಟದ ಸಮಿತಿ

   <u>ಅಧ್ಯಕ್ಷತೆ:</u>
   ಡಾ. ಸಿ.ಎನ್. ಅಶ್ವಥ್‌ನಾರಾಯಣ್, ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ

ದಿನಾಂಕ : 25–03–2017 ಶನಿವಾರ ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಸರ್ಕಾರಿ ಮದರಿ ಪ್ರಾಥಮಿಕ ಪಾಠಶಾಲೆಯ ಆಟದ ಮೈದಾನ
(ಮಲ್ಲೇಶ್ವರಂ ಆಟದ ಮೈದಾನದ ಎದುರು), ಮಲ್ಲೇಶ್ವರಂ, ಬೆಂಗಳೂರು.

**ವಿಧಾನಸಭೆಯಲ್ಲಿ ಇಂದು:**

## ಸಾವಯವ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಹಾಯಧನ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ಔಷಧ ಸಿಂಪಡಿಸದೇ ಕಾಯಿಪಲ್ಯೆ ಬೆಳೆಯಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಾವಯವ ಕೃಷಿ ಪದ್ಧತಿಯಲ್ಲಿ, ತೋಟಗಾರಿಕೆ ಬೆಳೆಗಳನ್ನು ರೈತರು ಬೆಳೆಯಲು ಸಹಾಯಧನ ನೀಡಲಾಗುತ್ತಿದೆ ಎಂದು ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತಿಳಿಸಿದರು

ವಿಧಾನಸಭೆಯಲ್ಲಿಂದು ನಡೆದ ಕಲಾಪದ ಸಂದರ್ಭದಲ್ಲಿ ಪಾಟೀಲ್ ಜಿ.ಟಿ. ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಅವರು ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡುತ್ತಿದ್ದು ಪ್ರಚಾರದ ಮೂಲಕ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ ಎಂದರು.

ಜೆಡಿ:ಪಿಎಸ್‌ಐ:ಜಿಪಿಆರ್.

## ವಿವಿಧ ಹಂತದ 4215 ಪಶುವೈದ್ಯಕೀಯ ಸಂಸ್ಥೆಗಳು

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಒಟ್ಟು 4215 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಎ. ಮಂಜು ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯ ಕಲಾಪ ಸಂದರ್ಭದಲ್ಲಿ ನವಲಗುಂದ ಶಾಸಕ ಕೋನರೆಡ್ಡಿ ಎನ್.ಹೆಚ್. ಅವರ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಅವರು 2017–18ನೇ ಸಾಲಿನ ಅನುದಾನದ ಲಭ್ಯತೆಯ ಮೇರೆಗೆ ಹಾಗೂ ಬೇಡಿಕೆಗನುಸಾರವಾಗಿ ಹಂತ ಹಂತವಾಗಿ

ಔಷಧ ಮತ್ತು ಪಶುವೈದ್ಯಕೀಯ ಸಲಕರಣೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಜೆಡಿ:ಪಿಎಸ್‌ಐ:ಜಿಪಿಆರ್.

# 132 ತಾಲ್ಲೂಕಿನಲ್ಲಿ ಕೃಷಿಭಾಗ್ಯ ಅನುಷ್ಠಾನ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯ 2014-15 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಪ್ರಸಕ್ತ ರಾಜ್ಯದ 25 ಜಿಲ್ಲೆಗಳ 132 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ಸದನಕ್ಕೆ ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ನಡೆದ ಕಲಾಪ ಸಂದರ್ಭದಲ್ಲಿ ಶಾಸಕ ಪಾಟೀಲ್ ಜೆ.ಟಿ. ಅವರ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಅವರು ಕೃಷಿ ಹೊಂಡದ ಚಟುವಟಿಕೆ ಸೇರಿದಂತೆ ಜಲಾನಯನ ಕಾಮಗಾರಿಗಳ ಅನುಷ್ಠಾನದ ಕುರಿತು ಅರಿವು ಮೂಡಿಸಲು ಇಲಾಖೆ ವತಿಯಿಂದ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಬೀದಿನಾಟಕ, ಜಾಥ, ಗೋಡೆಬರಹ ಮತ್ತು ಗ್ರಾಮಸಭೆಗಳನ್ನು ಆಯೋಜಿಸುವುದರ ಮೂಲಕ ಅರಿವನ್ನು ಮೂಡಿಸಲಾತ್ತಿದೆ ಎಂದರು.

ಜೆಡಿ:ಪಿಎಸ್‌ಐ:ಜಿಪಿಆರ್.

# ಸಾವಯವ ಭಾಗ್ಯ ಯೋಜನೆ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "ಸಾವಯವ ಭಾಗ್ಯ ಯೋಜನೆ" ಯನ್ನು 2013-14 ನೇ ಸಾಲಿನಿಂದ ಹಾಗೂ ಕೇಂದ್ರ ಪುರಸ್ಕೃತ ಪರಂಪರಾಗತ ಕೃಷಿ ವಿಕಾಸ ಯೋಜನೆಯನ್ನು 2015-16 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯ ಕಲಾಪ ಸಂದರ್ಭದಲ್ಲಿ ಶಾಸಕ ಹ್ಯಾರಿಸ್ ಎನ್.ಎ. ಅವರ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಅವರು ಸಾವಯವ ಕೃಷಿ ಮಿಷನ್ ಯೋಜನೆಯು

**ಸಂಪೂರ್ಣ ರಾಜ್ಯವಲಯ ಕಾರ್ಯಕ್ರಮವಾಗಿದ್ದು, 2008-09 ನೇ ಸಾಲಿನಿಂದ 2010-11 ನೇ ಸಾಲಿನವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಕ: ಕೃಇ/149/ಕೃಉಇ/2013 ದಿನಾಂಕ: 29-01-2014 ರನ್ವಯ ಈ ಯೋಜನೆಯನ್ನು ರದ್ದುಗೊಳಿಸಲಾಗಿರುತ್ತದೆ ಎಂದರು.**

**ಜೆಡಿ:ಪಿಎಸ್ಐ:ಜಿಪಿಆರ್.**

## ರಾಯಚೂರು ವಿಶ್ವವಿದ್ಯಾಲಯ - ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

**371 ಜೆ ನಿಯಮ ಜಾರಿಯಾದ ನಂತರ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ 2015-16 ನೇ ಸಾಲಿಗೆ ಇಟ್ಟು 11 ಅಧಿಕಾರಿ ಹುದ್ದೆಗಳು, 193 ಶಿಕ್ಷಕ ಹುದ್ದೆಗಳು ಹಾಗೂ 146 ಶಿಕ್ಷಕೇತರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಸರ್ಕಾರವು ಅನುಮತಿ ನೀಡಿದ್ದು, ಸದರಿ ನೇಮಕಾತಿ ಪ್ರಕ್ರಿಯೆ ಜಾಲ್ಲಿಯಲ್ಲಿದೆ ಎಂದು ತಿಳಿಸಿದರು.**

**ವಿಧಾನಸಭೆಯಲ್ಲಿ ಇಂದು ನಡೆದ ಕಲಾಪ ಸಂದರ್ಭದಲ್ಲಿ ದೇವದುರ್ಗ ಶಾಸಕ ಶಿವನಗೌಡ ನಾಯಕ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಅವರು ನೇಮಕಾತಿ ಪ್ರಕ್ರಿಯೆಗಳು ಚಾಲ್ತಿಯಲ್ಲಿರುವುದರಿಂದ ನಿಯಮಾನುಸಾರ ನೇಮಕಾರಿ ಪ್ರಕ್ರಿಯೆಯನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.**

**ಜೆಡಿ:ಪಿಎಸ್ಐ:ಜಿಪಿಆರ್.**

.

## ಉದ್ದಿಮೆಗಳ ಪುನ:ಶ್ಚೇತನಕ್ಕಾಗಿ - ಕಾರ್ಯನೀತಿ ಮೌಲ್ಯನಿರ್ಧರಣೆ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

**ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಪುನ:ಶ್ಚೇತನಕ್ಕಾಗಿ ಸರ್ಕಾರದ ಯೋಜನಾ ಇಲಾಖೆಯ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವತಿಯಿಂದ ಮೌಲ್ಯನಿರ್ಧರಣೆ ಮತ್ತು ಕೆ.ಪಿ.ಎಂ.ಜಿ. ಹಾಗೂ ಎಫ್.ಐ.ಸಿ.ಸಿ.ಐ. ಸಹಭಾಗಿತ್ವದಲ್ಲಿ ಆಯಕಟ್ಟಿನ**

ಕಾರ್ಯನೀತಿ ಮೌಲ್ಯನಿರ್ಧರಣೆ  ಅಧ್ಯಯನ ಜರುಗಿಸಲಾಗುತ್ತಿದೆ. ಈ ಸಂಸ್ಥೆಗಳು ನೀಡುವ ಅಂತಿಮ ವರದಿಯನ್ನಾಧರಿಸಿ ಸಾರ್ವಜನಿಕ ಉದ್ದಿಮೆಗಳ ಸಂಬಂಧಪಟ್ಟ ಆಡಳಿತಗ ಇಲಾಖೆಗಳು ಕ್ರಮಕೈಗೊಳ್ಳುತ್ತವೆ ಎಂದು ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ನಡೆದ ಕಲಾಪ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರ ಶಾಸಕ ಡಾ ಸುಧಾಕರ್ ಕೆ. ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಭದ್ರಾವತಿಯಲ್ಲಿರುವ ಮೈಸೂರು ಕಾಗದ ಕಾರ್ಖಾನೆಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ, ನಿರ್ದಿಷ್ಟ ಅವಧಿಗೆ ಹಾಗೂ ಅಗತ್ಯ ಷರತ್ತು ಮತ್ತು ನಿಬಂಧನೆಗಳೊಂದಿಗೆ ನೀಡಲು ಕ್ರಮಕೈಗೊಳ್ಳಲಾಗಿದೆ. ಪ್ರಕ್ರಿಯೆ ಚಾಲನೆಯಲ್ಲಿದೆ.

ಮೈಸೂರು ಕಾಗದ ಕಾರ್ಖಾನೆಯ ಖಾಯಂ ನೌಕರರಿಗೆ ವಿಶೇಷ ಸ್ವಯಂ ನಿವೃತ್ತಿ ಯೋಜನೆ ಮತ್ತು ಗುತ್ತಿಗೆ ಕಾರ್ಮಿಕರಿಗೆ ಸ್ವ-ಇಚ್ಛಾ  ನಿರ್ಗಮನ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಜೆಡಿ:ಪಿಎಸ್‌ಐ:ಜಿಪಿಆರ್.

# ನೈಸ್ ಜಂಕ್ಷನ್‌ನಿಂದ ತಿಪ್ಪಗೊಂಡನಹಳ್ಳಿಯ ಜಲಾಶಯವರೆಗಿನ ಮಾಗಡಿ ರಸ್ತೆ ಅಗಲೀಕರಣ ಕಾಮಗಾರಿಗೆ ಟೆಂಡರ್

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ನೈಸ್ ಜಂಕ್ಷನ್‌ನಿಂದ ತಾವರೆಕೆರೆ ಮಾರ್ಗವಾಗಿ ತಿಪ್ಪಗೊಂಡನಹಳ್ಳಿ ಜಲಾಶಯವರೆಗಿನ ಮಾಗಡಿ ರಸ್ತೆಯ ಅಗಲೀಕರಣ ಕಾಮಗಾರಿಯನ್ನು ಕೆಶಿಪ್-3 ಯೋಜನೆ ಅಡಿಯಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕ್ ಆರ್ಥಿಕ ನೆರವಿನಲ್ಲಿ ಅನುಷ್ಠಾನಗೊಳಿಸಲು ಫೆಬ್ರವರಿ 10 2017 ರಂದು ಟೆಂಡರ್ ಕರೆಯಲಾಗಿದೆ ಎಂದು ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಇಂದು ನಡೆದ ಕಲಾಪ ಸಂದರ್ಭದಲ್ಲಿ ಯಶವಂತಪುರ ಶಾಸಕ ಸೋಮಶೇಖರ್ ಎಸ್.ಟಿ. ಅವರ ಪ್ರಶ್ನೆಗೆ ಉತ್ತರಿಸುತ್ತಾ ಸದರಿ ರಸ್ತೆಯನ್ನು ಐಆರ್‌ಸಿ ಸಂಸ್ಥೆಯು ನಿಗಧಿಪಡಿಸಿರುವ ಮಾನದಂಡಗಳು ಹಾಗೂ ವಿವರಣೆಗಳನ್ವಯ ನಿರ್ಮಿಸಲು ಯೋಜಿಸಲಾಗಿದೆ ಎಂದರು.

ಜೆಡಿ:ಪಿಎಸ್ಐ:ಜಿಪಿಆರ್.

## <u>“ವಾಸವಾಗಿರುವವನೇ ಆ ಮನೆಯ ಒಡೆಯ” – ಭೂ ಸುಧಾರಣೆ ವಿಧೇಯಕ 2016 ಕ್ಕೆ ತಿದ್ದುಪಡಿ – ಸದನದಲ್ಲಿ ಸರ್ವಾನುಮತದಿಂದ ಜಾರಿಗೆ.</u>

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961 ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವೆಂದು ಸದನದಲ್ಲಿ ವಿಧೇಯಕವನ್ನು ಮಂಡಿಸಲಾಯಿತು. ಸದನ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ ನಂತರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ 2016 ವನ್ನು ಜಾರಿಗೆ ತರಲಾಯಿತು.

ಕಾಯ್ದೆ ಪ್ರಕಾರ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರ ಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್ ಕಾಲೋನಿಗಳಂಥ ದಾಖಲಿಸಿಲ್ಲದ ಜನವಸತಿಗಳಲ್ಲಿ ವಾಸಿಸುತ್ತಿರುವ ವಾಸದ ಮನೆಗಳನ್ನು ಇರುವ ನಿವೇಶನದ ಸಹಿತವಾಗಿ ಎಲ್ಲಾ ಉಪಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತಗೊಳ್ಳತಕ್ಕದ್ದು ಎಂದು ತಿದ್ದುಪಡಿ ತರಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸ್ವಾತಂತ್ರ್ಯಾ ನಂತರ ಉಳುವವನೆ ಭೂಮಿಯ ಒಡೆಯ ಎಂಬ ಕಾನೂನು ಬಂದ ನಂತರ ಇವತ್ತು ನಮ್ಮ ಸರ್ಕಾರ ತಂದಿರುವ ಇದೊಂದು ಐತಿಹಾಸಿಕ ವಿಧೇಯಕ ಇದಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ನೀಡಿದ್ದ ಮಾತಿನಂತೆ ನಡೆದಿದೆ. ದಾಖಲೆಗಳಿಲ್ಲದೆಯೂ ಯಾರು ವಾಸ ಮಾಡುತ್ತಿದ್ದಾರೋ ಆ ವಸತಿಗೆ ಅವರೇ ಒಡೆಯರಾಗುತ್ತಾರೆ. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಈ ತಿದ್ದುಪಡಿಯನ್ನು ತರಲು ಶಾಸಕ ಶಿವಮೂರ್ತಿ ಮತ್ತಿತರರು ಒತ್ತಾಯ ಹಾಕುತ್ತಲೇ ಇದ್ದರು, ಆಗ ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳಾದ ನರಸಿಂಹಯ್ಯ ಅವರ ಅಧ್ಯಕ್ಷತೆಯಲ್ಲಿ ಕಾನೂನು ಇಲಾಖೆಯ ನಿವೃತ್ತ ಕಾರ್ಯದರ್ಶಿಗಳಾದ ಎಂ.ಆರ್ ಹೆಗ್ಗಡೆ, ನಿವೃತ್ತ ಕೆಎಎಸ್ ಜಂಟಿ ನಿರ್ದೇಶಕ ಅನಂತರಾಮಯ್ಯ, ಕಾನೂನು ಸಚಿವರನ್ನೊಳಗೊಂಡ ಸಮಿತಿ ರಚಿಸಿ ವರದಿ ಪಡೆದು, ಹೈಕೋರ್ಟ್ ಜಡ್ಜ್ ಜೊತೆ ಚರ್ಚಿಸಿ, **ವಾಸಮಾಡುತ್ತಿರುವವರೇ ವಾರಸುದಾರರಾಗುತ್ತಾರೆ** ಎಂಬ ಕಾಯ್ದೆ ತರಲಾಗಿದೆ. ಇದೊಂದು ಅತ್ಯಂತ ಕ್ರಾಂತಿಕಾರಕ , ಪ್ರಗತಿದಾಯಕ ವಿಧೇಯಕವಾಗಿದ್ದು, ಸುವರ್ಣಾಕ್ಷರದಲ್ಲಿ ಬರೆದಿಡುವಂತಹದ್ದು. ಅಧ್ಯಕ್ಷರು ಇಂತಹಾ ಉತ್ತಮ ಬಿಲ್ ಪಾಸ್ ಮಾಡಲು ಅವಕಾಶಕೊಟ್ಟಿದ್ದಕ್ಕಾಗಿ ಹಾಗೂ ಸದನದಲ್ಲಿ ವಿರೋಧಪಕ್ಷದ ನಾಯಕರು, ಸದಸ್ಯರು, ಜೆಡಿಎಸ್ ನಾಯಕರುಗಳು ಎಲ್ಲಾ ಸದಸ್ಯರು ಒಕ್ಕೊರಲಿನಿಂದ ಒಪ್ಪಿಗೆ ಕೊಟ್ಟಿದ್ದಾರೆ ಅದಕ್ಕಾಗಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ ಎಂದರು.

ಅಧ್ಯಕ್ಷರಾದ ಕೋಳಿವಾಡ ಅವರು ಮಾತನಾಡಿ ಇಂತಹಾ ಒಂದು ಉತ್ತಮ ಬಿಲ್ ತಂದಂತಹಾ ದಿನ ತಾವು ಈ ಕುರ್ಚಿಯಲ್ಲಿ ಕುಳಿತು **ವಾಸ ಮಾಡುವವನೇ ಆ ಮನೆಯ ಒಡೆಯ ಎನ್ನುವಂತಹಾ**

**ಕಾಯ್ದೆ** ಜಾರಿಯಾಗಿರುವುದು ನನ್ನ ಪುಣ್ಯ, ಇದಕ್ಕೆ ಒಕ್ಕೊರಲಿನಿಂದ ಒಪ್ಪಿಗೆ ಕೊಟ್ಟ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಸದಸ್ಯರುಗಳಿಗೂ ನಾನು ವಂದಿಸುತ್ತೇನೆ ಎಂದರು.

ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಅವರು ಮಾತನಾಡಿ ಇವತ್ತು ತಂದಿರುವ ವಿದೇಯಕ ಅತ್ಯುತ್ತಮವಾಗಿದ್ದು, ಕೆಳವರ್ಗದ, ಸಮಾಜದಲ್ಲಿ ಗುರುತಿಸಿಕೊಂಡಿರದ ಅನೇಕ ತಂಡಗಳಿಗೆ ಇದರಿಂದ ಉಪಯೋಗವಾಗಿದೆ. ಅನೇಕ ವರ್ಷಗಳಿಂದ ನಾವು ಇದನ್ನು ತರಬೇಕೆಂದು ಬೆಂಬಲಿಸುತ್ತಲೇ ಬಂದಿದ್ದೆವು. ಇದರಲ್ಲಿ ಇನ್ನು ಏನಾದರೂ ಸಣ್ಣಪುಟ್ಟ ಕಾನೂನು ತೊಡಕುಗಳಿದ್ದಲ್ಲಿ ಸರಿಪಡಿಸಿ ತಕ್ಷಣದಿಂದ ಜಾರಿಯಾಗಲು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ಆದೇಶ ನೀಡಬೇಕು. ಆ ಮೂಲಕ ಫಲಾನುಭವಿಗಳಿಗೆ ಪ್ರಾಮಾಣಿಕವಾಗಿ ಅದರ ಫಲ ಸಿಗುವಂತಾಗಬೇಕು, ಇದನ್ನು ಎಲ್ಲರೂ ಪಕ್ಷಬೇದ ಮರೆತು ಜಾರಿಗೆ ತಂದಿದ್ದೇವೆ ಇದೊಂದು ಉತ್ತಮ ಕೆಲಸ ಎಂದರು.

ಸಚಿವ ಕಾಗೋಡು ತಿಮ್ಮಪ್ಪ ಅವರು ಮಾತನಾಡುತ್ತ, ಉಳುವವನೆ ಭೂಮಿಯ ಒಡೆಯ ಎಂಬ ಕಾಯ್ದೆ ತರುವಾಗ ತಮ್ಮ ಹೋರಾಟದ ದಿನಗಳನ್ನು ನೆನೆಸಿಕೊಳ್ಳುತ್ತಾ, ಇವತ್ತು ಇದೊಂದು ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದೇವೆ. ಇಂತಹಾ ಸನ್ನಿವೇಶದಲ್ಲಿ ಇಲ್ಲಿ ನಾನಿರುವುದು ನಮ್ಮ ಪುಣ್ಯ, ಇದೊಂದು ಇತಿಹಾಸ ಸೃಷ್ಟಿಮಾಡುವ ಕೆಲಸ ಎಂದರು.

ಸಚಿವ ಆಂಜನೇಯ ಸಚಿವ ಶಿವರಾಜ್ ತಂಗಡಗಿ ಮತ್ತಿತರ ಸಚಿವರು, ಶಾಸಕರುಗಳು ಅನೇಕ ತಳ ವರ್ಗದ ವಸತಿ ಹೀನ ಜನಾಂಗಕ್ಕೆ ಕಂದಾಯ ಗ್ರಾಮ, ಗ್ರಾಮ ಮಾನ್ಯತೆಯನ್ನು ಸರ್ಕಾರ ಕಲ್ಪಿಸಿಕೊಟ್ಟಿದೆ. ಧ್ವನಿ ಇಲ್ಲದವರಿಗೆ ಧ್ವನಿ ನೀಡಿದೆ. ಇದು ಯುಗಾದಿಯ ಹೊಸವರ್ಷಕ್ಕೆ ಸರ್ಕಾರ ಕೊಟ್ಟ ಉಡುಗೊರೆ, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಇಂತಹಾ ಉತ್ತಮ ವಿಧೇಯಕವನ್ನು ತಂದಂತಹಾ ವಿಶೇಷವಾಗಿ ಆ ವರ್ಗದ ಜನರಿಗೆ ಕೊಟ್ಟಂತಹಾ ಹಕ್ಕಿಗಾಗಿ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದರು.

**ಜೆಡಿ:ಪಿಎಸ್ಐ:ಜಿಪಿಆರ್.**

## ರಾಜ್ಯದಲ್ಲಿ ವಿದ್ಯುತ್ ಪೂರೈಕೆ ಸಮರ್ಪಕ – ಇಂಧನ ಸಚಿವ ಡಿ.ಕೆ. ಶಿವಕುಮಾರ್

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ದೈನಂದಿನ ಲಭ್ಯವಾಗುವ ವಿದ್ಯುತ್ತಿನ ಪ್ರಮಾಣವನ್ನಾಧರಿಸಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಸರ್ಕಾರವು ವಿದ್ಯುತ್ ಪೂರೈಕೆ ಅವಧಿಯನ್ನು ಘೋಷಿಸಿರುತ್ತದೆ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಅವರು ವಹದೇವ ಪುರ ಶಾಸಕರಾದ ಅರವಿಂದ ಲಿಂಬಾವಳಿ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು. ನಗರ/ಪಟ್ಟಣಗಳಲ್ಲಿ 22–24 ಗಂಟೆ, ಗ್ರಾಮೀಣ ಪ್ರದೇಶದಲ್ಲಿ 3 ಫೇಸ್ ವಿದ್ಯುತ್ 7 ಗಂಟೆಗಳ ಕಾಲ ಬ್ಯಾಚ್‌ಗಳಲ್ಲಿ ಸಂಜೆ 6

ರಿಂದ ಬೆಳಗ್ಗೆ 6 ವರೆಗೆ 10  ಗಂಟೆಗಳ ಸಿಂಗಲ್ ಫೇಸ್ ವಿದ್ಯುತ್ತನ್ನು ಪೂರೈಸಲಾಗುತ್ತಿದೆ. ಉದ್ಯುತ್ ಘಟಕಗಳು ಸ್ಥಗಿತವಾದಾಗ ಮಾರ್ಗಗಳ ಅಡಚಣೆಯಿಂದ ಕೆಲವೊಮ್ಮೆ ವ್ಯತ್ಯಯ ಉಂಟಾಗುತ್ತದೆ. ಮಾರ್ಚ್ ಏಪ್ರಲ್ ತಿಂಗಳಲ್ಲಿ ಶಾಲಾ-ಕಾಲೇಜುಗಳ ಪರೀಕ್ಷೆಗಳು ಪ್ರಾರಂಭವಾಗಿದ್ದು, ಮಕ್ಕಳ ಹಿತದೃಷ್ಟಿಯಿಂದ ಸಮರ್ಪಕ ವಿದ್ಯುತ್ ಪೂರೈಸಲು ರಾಜ್ಯ ಸರ್ಕಾರ ಮುಂಜಾಗ್ರತೆಕ್ರಮ ತೆಗೆದುಕೊಂಡಿದೆ. ಮೂರು ವರ್ಷಗಳಿಂದ ಸತತ ಬರಗಾಲವಿದ್ದ ಕಾರಣ ವಿದ್ಯುತ್ ಉತ್ಪಾದನೆ ಲಭ್ಯತೆ ಕಡಿಮೆ ಇದ್ದು, ಬೇಡಿಕೆಯನ್ನಾಧರಿಸಿ ವಿದ್ಯುತ್ ಖರೀದಿಯಿಂದ ಸರಿದೂಗಿಸಲಾಗುತ್ತಿದೆ. ದೀರ್ಘಾವಧಿ ಆಧಾರದಲ್ಲಿ ದಾಮೋದರ್ ವ್ಯಾಲಿ ಕಾರ್ಪೊರೇಷನ್ ರವರಿಂದ 450 ಮೆ.ವ್ಯಾ. ಮಹಾರಾಷ್ಟ್ರ ರಾಜ್ಯದಿಂದ ಮೇ 2017 ರವರೆಗೆ 300 ವೆ.ವ್ಯಾ.  ಮೇ 2017 ರವರೆಗೆ ಮೆ: ಪಿಟಿಸಿ ಇಂಡಿಯಾ ಲಿ. ಮತ್ತು ಮೆ: ಜೆಎಸ್‌ಡಬ್ಲಿಯು ಎನರ್ಜಿ ಲಿ. ಅವರಿಂದ 900 ಮೆ. ವ್ಯಾ. ಖರೀದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದಲೂ ಸಹ ಕೆ. ಇ. ಆರ್. ಸಿ. ನಿಗದಿಪಡಿಸಿದ ಜಕಾತಿ ಆಧಾರದಲ್ಲಿ ವಿದ್ಯುತ್ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

**ಜೆಡಿ:ಪಿಎಸ್ಐ:ಜಿಪಿಆರ್.**

## ನೆಲಮಂಗಲದ ರಸ್ತೆ ಕಾಮಗಾರಿ ಪ್ರಗತಿಯಲ್ಲಿ – ಲೋಕೋಪಯೋಗಿ ಸಚಿವ ಡಾ॥ ಹೆಚ್.ಸಿ. ಮಹದೇವಪ್ಪ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ 2016-17 ನೇ ಸಾಲಿನ ಹೊಸ ಕಾಮಗಾರಿ ರಸ್ತೆ, ಸೇತುವೆ, ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, ನವೀಕರಣಕ್ಕಾಗಿ ರೂ. 685.00 ಲಕ್ಷ, ನಬಾರ್ಡ್ ಲೆಕ್ಕಶೀರ್ಷಿಕೆಯಡಿ  ಅಭಿವೃದ್ಧಿ/ನವೀಕರಣಕ್ಕಾಗಿ 840.00 ಲಕ್ಷ ರೂ. ಪರಿಶಿಷ್ಟ ಜಾತಿ ಉಪಯೋಜನೆ ಅಡಿ 320.68 ಲಕ್ಷ ರೂ, ಗಿರಿಜಯ ಉಪಯೋಜನೆಯಡಿ 78.86 ಲಕ್ಷ ರೂ, ಪರಿಶಿಷ್ಟ ಜಾತಿ ಕಾಲೋನಿಗಳ ರಸ್ತೆಗಳ ಅಭಿವೃದ್ಧಿಗೆ 2ನೇ ಹಂತದಲ್ಲಿ 130.00 ಲಕ್ಷ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಪ್ರಗತಿಯಲ್ಲಿದೆ ಎಂದರು. ಅವರು ನೆಲಮಂಗಲ ಶಾಸಕರಾದ ಡಾ॥ ಕೆ. ಶ್ರೀನಿವಾಸಮೂರ್ತಿ ಅವರು ಸದನದಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

## ಪೌರ ಕಾರ್ಮಿಕರ ಸೇವೆ ಖಾಯಂಗೆ ಕ್ರಮ  – ಸಚಿವ ಈಶ್ವರ್ ಬಿ ಖಂಡ್ರೆ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಪೌರ ಕಾರ್ಮಿಕರ ಒಟ್ಟು ಸಂಖ್ಯೆ 15454 ಇದ್ದು, ಅವರಿಗೆ ಜೀವನಾಧಾರ, ಸಾಮಾಜಿಕ ಭದ್ರತೆ, ಆರೋಗ್ಯ ಸುರಕ್ಷತೆ ಹಾಗೂ ಅವರ ಕುಟುಂಬ ಕಲ್ಯಾಣಕ್ಕಾಗಿ ಕನಿಷ್ಟ ವೇತನ ರೂ. 14,040/-, 13,650/-, 13260/-, 12870/- ನಿಗದಿಮಾಡಲಾಗಿದೆ. ಮಾಸಿಕ ವೇತನದ ಜೊತೆಗೆ ಭವಿಷ್ಯನಿಧಿ, ಮತ್ತು ಕಾರ್ಮಿಕರ ರಾಜ್ಯ ವಿಮಾ ನಿಧಿಗೆ ವಂತಿಕೆಗಳನ್ನು ಪಾವತಿಸಲು ನಿರ್ದೇಶನ ನೀಡಲಾಗಿದೆ ಎಂದು ಪೌರಾಡಳಿತ ಸಚಿವ ಈಶ್ವರ್ ಬಿ. ಖಂಡ್ರೆ ಅವರು ಶಿರಸಿ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಪೌರ ಕಾರ್ಮಿಕರ ಸೇವೆಯನ್ನು ಹಂತಹಂತವಾಗಿ ಖಾಯಂಗೊಳಿಸಲು ಈಗಾಗಲೇ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ತೀರ್ಮಾನಿಸಿದ್ದು, ಸಮಿತಿ ರಚಿಸಿ, ಹರಿಯಾಣ ಮಾದರಿ ಅಧ್ಯಯನ ಮಾಡಿ, ಸಮಿತಿಯ ವರದಿಯಾಧರಿಸಿ, ವೃಂದ ನೇಮಕಾತಿ ನಿಯಮಗಳನ್ನು ರಚಿಸಿ, ಕೈಗೊಳ್ಳಲಾಗುತ್ತಿದೆ ಎಂದರು.

<u>ಪತ್ರಿಕಾ ಪ್ರಕಟಣೆ</u>

# ಹಿರಿಯ ನಾಗರೀಕರಿಗಾಗಿ
# ಉದ್ಯೋಗ ಮೇಳ ಮತ್ತು ಕೌಶಲ್ಯ ತರಬೇತಿ

**ಬೆಂಗಳೂರು, ಮಾರ್ಚ್ 24 , (ಕರ್ನಾಟಕ ವಾರ್ತೆ)**

**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಹಾಗೂ ಕೌಶಲ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಸರ್ಕಾರ ಇವರ ಸಹಯೋಗದೊಂದಿಗೆ ಮಾರ್ಚ್ 26 ರಂದು ಭಾನುವಾರದಂದು ಅರಮನೆ ಮೈದಾನ ಬೆಂಗಳೂರು ಇಲ್ಲಿ ಹಿರಿಯ ನಾಗರೀಕರ ಉದ್ಯೋಗ ಮೇಳ ಮತ್ತು ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.**

**ಅನೇಕ ಹಿರಿಯ ನಾಗರೀಕರು ವಿದ್ಯಾವಂತರು ಹಾಗೂ ವಿವಿಧ ಕ್ಷೇತ್ರಗಳಲ್ಲಿ 30 ಕ್ಕೂ ಹೆಚ್ಚು ವರ್ಷಗಳ ಕಾಲ ಕೆಲಸ ನಿರ್ವಹಿಸಿದ ಅನುಭವ ಉಳ್ಳವರು ಹಾಗೂ ಸದೃಡರೂ ಆಗಿರುತ್ತಾರೆ. ಇವರು ಗಳಿಸಿರುವ ಜ್ಞಾನ ಮತ್ತು ವಿದ್ವತ್ತು ಇಂದು ಉಪಯೋಗಕ್ಕೆ ಬಾರದೇ ವ್ಯರ್ಥವಾಗುತ್ತಿರುವ ಹಿನ್ನಲೆಯಲ್ಲಿ ಇಂತಹ ಹಿರಿಯ ನಾಗರೀಕರಿಗಾಗಿ ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು ಅನುವು ಮಾಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.**

**ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು ಈ ತರಬೇತಿಯ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಮನವಿ ಮಾಡಿದೆ.**

ಎಂಆರ್‌ಎಂ:ಜಿಪಿಆರ್.

# <u>ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ</u>

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ:26-03-2017ರ** ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ **ಶ್ರೀ. ಬೇವೂರು ರಾಮಯ್ಯ ಮತ್ತು ತಂಡ, ಚನ್ನಪಟ್ಟಣ ರವರಿಂದ ಜಾನಪದ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ **ಶ್ರೀ. ಜನ್ನಘಟ್ಟ ಕೃಷ್ಣಮೂರ್ತಿ ಮತ್ತು ತಂಡ ರವರಿಂದ ಜಾನಪದ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

4) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ ಶ್ರೀ ನಾಟ್ಯ ಭಾರತಿ ಟ್ರಸ್ಟ್ ರವರಿಂದ ಶ್ರೀ ನಾಗೇಶ್.ಜಿ.ಎಸ್ ರವರಿಂದ **ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ **ಶ್ರೀವಾಣಿ ವಿದ್ಯಾ ಕೇಂದ್ರ , ರಾಜಾಜಿನಗರ, ಬೆಂಗಳೂರು** ರವರ **ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

- ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲಭವನ ಸೊಸೈಟಿ, ಬೆಂಗಳೂರು ರವರ ಸಹಯೋಗದೊಂದಿಗೆ ಚಿರಂಜೀವಿ ಶಶಾಂಕ್ ಕಿರಣ್ ನಾಯರ್ ರವರಿಂದ **ಭರತನಾಟ್ಯ ಹಾಗೂ ಕು: ಲಾವಣ್ಯ ರಾವ್ ರವರಿಂದ ವೀಣಾವಾದನ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

- **ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 10.00 ಘಂಟೆಯವರೆಗೆ Tathagat Heart Care Center, Mallige Medical Center Premises, Crescent Road, Bangalore-01 ರವರ ವತಿಯಿಂದ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರ ಮತ್ತು ಆರೋಗ್ಯದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

ಎಸ್‌ಎಂ:ಜೆಡಿ:ಜಿಪಿಆರ್.